ಇದಕ್ಕೆ ಪೂರಕವೆನಿಸುವ ಇನ್ನೆರಡು ಉದಾಹರಣೆಗಳನ್ನು ನೋಡಿ. ಲಡಾಕ್‌ನ ಮರುಭೂಮಿಯಲ್ಲಿ ಸಂಚರಿಸುತ್ತಿರುವಾಗ, ನಡುನಡುವೆ ಅಲ್ಲಲ್ಲಿ ಒಂಟಿ ಮನೆಗಳು ಕಾಣಿಸುತ್ತವೆ. ಕಣ್ಣಳತೆಯ ದೂರದಲ್ಲೆಲ್ಲೂ ನಾಲ್ಕೈದು ಕಿಲೋಮೀಟರುಗಳು ಕೇವಲ ಕಲ್ಲು ಮಣ್ಣು, ಕುರುಚಲು ಗಿಡಗಳ ಹೊರತಾಗಿ ಮತ್ತ್ಯಾವ ಮನೆಯಾಗಲೀ, ಮನುಷ್ಯ ವಸತಿಯಾಗಲೀ ಕಾಣುವುದಿಲ್ಲ. ಅಂಥ ಜಾಗದ ಆ ಒಂಟಿ ಮನೆಯಲ್ಲಿ ವ್ಯಕ್ತಿಯೊಬ್ಬ, ತನ್ನ ಹೆಂಡತಿ, ಪುಟ್ಟ ಮಗು, ಎರಡು ಕುರಿ, ಹತ್ತಾರು ಯಾಕ್ ಪ್ರಾಣಿಗಳೊಡನೆ ಸಂಸಾರ ಮಾಡುತ್ತಾನೆಂಬುದು ನಮ್ಮ ಗ್ರಹಿಕೆಗೆ ದಕ್ಕುವ ಸಂಗತಿಯಲ್ಲ; ಆ ವಿಷಯ ಬದಿಗಿಡೋಣ. ದೂರದಲ್ಲೆಲ್ಲೋ ವಾಹನವೊಂದು ಕಾಣುತ್ತಿರುವಂತೆ ಆ ಮನೆಯ ಮಗು ಓಡುತ್ತ ಬಂದು ರಸ್ತೆಯ ಬದಿಯಲ್ಲಿ ಕೈ ಚಾಚಿ ನಿಂತುಕೊಳ್ಳುತ್ತದೆ. ಅದಕ್ಕೆ ಗೊತ್ತಿದೆ – ಬೈಕು, ಕಾರುಗಳಲ್ಲಿ ಲಡಾಕ್ ಸುತ್ತಲು ಬರುವ ಪ್ರವಾಸಿಗಳು ತಮ್ಮಲ್ಲಿರುವ ಬಿಸ್ಕತ್ತು, ಚಾಕಲೇಟು ಅಥವಾ ಅರೆ ತಿಂದ ಚಿಪ್ಸು ಪೊಟ್ಟಣವನ್ನು ತನ್ನ ಕೈಲಿಟ್ಟು ಸಾಗುತ್ತಾರೆಂದು. ಅದನ್ನು ಆ ಮಗುವಿಗೆ ರೂಢಿ ಮಾಡಿಸಿಯಾಗಿದೆ.

ಇಲ್ಲಿ ಪ್ರವಾಸಿಗ ಮಾಡುತ್ತಿರುವುದು ಸರಿಯೋ ತಪ್ಪೋ? ಮಗುವಿನೆಡೆಯ ಸಹಜ ಪ್ರೀತಿಯನ್ನು ಆತ ವ್ಯಕ್ತಪಡಿಸುತ್ತಿರಲಿ ಅಥವಾ ತನ್ನ ಕರುಣೆಯ ಪ್ರದರ್ಶನಕ್ಕೆ ಆ ಮಗುವನ್ನು ಬಳಸಿಕೊಳ್ಳುತ್ತಿರಲಿ, ಇದರಿಂದ ಆ ಮಗು ಉಪಕೃತವಾಯಿತೇ? ಅಥವಾ ಅದರಿಂದಾಗುವ ತೊಂದರೆಯೇ ಹೆಚ್ಚೋ? ಆ ಮಗುವಿನ ಅಪ್ಪ, ಇವರೆಲ್ಲ ಏನೇನೋ ಹಾಳುಮೂಳು ತಿನ್ನಲು ಕೊಟ್ಟು ಮಗುವನ್ನು ಹಾಳುಗೆಡುತ್ತಿದ್ದಾರೆ ಅಂದುಕೊಳ್ಳಬಹುದೇ ಅಥವಾ ಖುಷಿ ಪಡಬಹುದೇ? ಹೊಟ್ಟೆಗೆ ಎರಡು ಹೊತ್ತಿನ ಅನ್ನ ಗಿಟ್ಟಿಸಿಕೊಳ್ಳುವ ಸಾಮರ್ಥ್ಯವಿರದಿದ್ದರೆ ಆ ಕುಟುಂಬ ಅಲ್ಲಿ ಜೀವಿಸುವ ಆಯ್ಕೆ ಮಾಡಿಕೊಳ್ಳುತ್ತಿತ್ತೇ? ಪ್ರವಾಸಿಗರ ಈ ಕೃತ್ಯ, ಆ ಮಗುವಿನಲ್ಲಿ ತನ್ನದಲ್ಲದ ಆಹಾರ ಪದ್ಧತಿಯ, ತನ್ನ ಜೀವನಶೈಲಿಯ ಚೌಕಟ್ಟಿನ 'ಹೊರಗಿನ ಆಮಿಷ'ವೊಂದು ಮೊಳಕೆಯೊಡೆಯುವಂತೆ ಪ್ರೇರೇಪಿಸಬಹುದಲ್ಲವೇ?

ಇನ್ನೊಂದು ಪ್ರಸಂಗ: ಅಂಡಮಾನಿನ ದಟ್ಟ ಕಾಡುಗಳಲ್ಲಿ 'ಸಫಾರಿ' ಮಾಡುವಾಗ ರಸ್ತೆಯ ಬದಿಯಲ್ಲಿ ಯಾವುದಾದರೂ ಆದಿವಾಸಿಗಳು ಕಣ್ಣಿಗೆ ಬೀಳಲೆಂದು ಪ್ರವಾಸಿಗರು ಕಾತರಿಸುತ್ತಿರುತ್ತಾರೆ. ಹಾಗೇನಾದರೂ ಕಣ್ಣಿಗೆ ಬಿದ್ದ ಪಕ್ಷದಲ್ಲಿ, ಯಾರೂ ಜೋರಾಗಿ ಚೀರುವುದಾಗಲೀ, ಫೋಟೋ ತೆಗೆಯುವುದು, ಅವರತ್ತ ಆಹಾರ ಪೊಟ್ಟಣಗಳನ್ನು ಎಸೆಯುವುದಾಗಲೀ ಮಾಡಕೂಡದೆಂದು ಮೊದಲೇ ಕಟ್ಟುನಿಟ್ಟಾಗಿ ಸೂಚನೆ ನೀಡಲಾಗಿರುತ್ತದೆ. ಆದಾಗ್ಯೂ ಕೂಡಾ ಜನ ಆ ಸೂಚನೆಯನ್ನು ಮೀರಿ ತಮ್ಮ ಕರುಣಾಭಾವವನ್ನು ಹತ್ತಿಕ್ಕಿಕೊಳ್ಳಲಾಗದ್ದನ್ನು



ಕಲೆ:ವಿಠ್ಠಲಪ್ಪ ಶಂ. ಹೂಗಾರ

ನಾನು ನೋಡಿದ್ದೇನೆ. ಆದಿವಾಸಿಯೊಬ್ಬ ಕಂಡು ಮರೆಯಾಗುವ ಅರೆಕ್ಷಣದ ನಡುವೆಯೇ, ಬಸ್ಸಿನ ಸಿಬ್ಬಂದಿಯ ಕಣ್ಣು ತಪ್ಪಿಸಿ, 'ಫೇಕೋ... ಫೇಕೋ...' ಎಂದು ಗುಸುಗುಸು ಮಾಡುತ್ತ ಲಗುಬಗೆಯಿಂದ ಕಿಟಕಿಯ ಸರಳುಗಳ ನಡುವೆ ಕೈತೂರಿ ತಿಂಡಿಯ ಪೊಟ್ಟಣವನ್ನು ಹೊರಗೆ ಬಿಸುಟಿತ್ತು ನನ್ನೆದುರು ಕುಳಿತಿದ್ದ ಒಂದು ಗುಂಪು. ಅಂಡಮಾನಿನಲ್ಲಿ ಕಾಣುವ ಆದಿವಾಸಿಗೆ ಆಹಾರ ಕೊಡಲೆಂದೇ